ನೀಡುವ ಮೂಲಕ ಆರ್‌ಟಿಇ ಸೌಲಭ್ಯವನ್ನು ಎಲ್ಲಾ ವರ್ಗದ ಅರ್ಹ ಗುಂಪುಗಳಿಗೆ ತಲುಪಿಸಲು ಕ್ರಮಕೈಗೊಳ್ಳಲಾಗಿದೆ.

ಹುನರ್‌ಸೆ ರೋಜ್‌ಗಾರ್ ತಕ್ ಯೋಜನೆ ಅನುದಾನ

330 (244)

ಶ್ರೀ ವಸಂತಬಂಗೇರ ಕೆ (ಬೆಳ್ತಂಗಡಿ)

ಅ) ಕೇಂದ್ರ ಸರಕಾರದ ಹುನರ್‌ಸೆ ರೋಜ್‌ಗಾರ್ ತಕ್ ಯೋಜನೆಯಡಿ ರಾಜ್ಯಕ್ಕೆ ಬಿಡುಗಡೆಯಾದ ಮೊತ್ತ ಎಷ್ಟು;

ಆ) ಈ ಯೋಜನೆಯಡಿ ಎಷ್ಟು ಮಂದಿಗೆ ಯಾವ ವಿಷಯಗಳ ಬಗ್ಗೆ ತರಬೇತಿ ನೀಡಲಾಗಿದೆ;

ಇ) ತರಬೇತಿಯಲ್ಲಿ ಭಾಗವಹಿಸಿದವರಿಗೆ ನೀಡಲಾದ ಸ್ಟೈಫಂಡ್ ಮೊತ್ತ ಎಷ್ಟು;

ಈ) ಯೋಜನೆಯ ಪ್ರಚಾರಕ್ಕಾಗಿ ಜಾಹೀರಾತು, ಇತ್ಯಾದಿಗಳಿಗೆ ಮಾಡಲಾದ ಖರ್ಚು ಎಷ್ಟು?

ಶ್ರೀ ಆನಂದ್ ಸಿಂಗ್

(ಪ್ರವಾಸೋದ್ಯಮ ಸಚಿವರು)

ಅ) ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು ಹುನರ್‌ಸೆ ರೋಜ್‌ಗಾರ್ ತಕ್ ಯೋಜನೆಯಡಿ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನ ರೂ.2,20,10,112.00 ಗಳಾಗಿರುತ್ತದೆ.

ಆ) ಈ ಯೋಜನೆ ಅಡಿ ಈವರೆಗೆ ಕೆಳಗಿನಂತೆ ತರಬೇತಿಗಳನ್ನು ನೀಡಲಾಗಿದೆ.

1.	ಫುಡ್ ಪ್ರೊಡಕ್ಷನ್	897
2.	ಫುಡ್ ಅಂಡ್ ಬೇವರೇಜ್ ಸರ್ವೀಸ್	322
3.	ಹೌಸ್‌ಕೀಪಿಂಗ್	83
	ಒಟ್ಟು	**13.02**

ಇ) ರೂ.19.77 ಲಕ್ಷಗಳನ್ನು ಸ್ಟೈಫಂಡ್ ರೂಪದಲ್ಲಿ ತರಬೇತಿ ಫಲಾನುಭವಿಗಳಿಗೆ ವಿತರಿಸಲಾಗಿದೆ.

ಈ) ಈ ಯೋಜನೆಯ ಪ್ರಚಾರ ಮತ್ತು ಜಾಹೀರಾತು ಇತ್ಯಾದಿಗಳಿಗೆ ರೂ.64,64,761/– ಗಳನ್ನು ಖರ್ಚು ಮಾಡಲಾಗಿದೆ.